# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 375 |
| ಸದಸ್ಯರ ಹೆಸರು | ಶ್ರೀ ಎನ್ ರವಿಕುಮಾರ್ |
| ಉತ್ತರಿಸುವ ದಿನಾಂಕ | 21-12-2022 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಜಿಲ್ಲಾವಾರು, ದೇವಸ್ಥಾನವಾರು ವಿವರ ಮತ್ತು ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಒಟ್ಟು ಮೌಲ್ಯವೆಷ್ಟು? | i) ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ರಾಜ್ಯದ ಒಟ್ಟು 34563 ದೇವಸ್ಥಾನಗಳು ಒಳಪಟ್ಟಿರುತ್ತವೆ. ಇಲಾಖಾ ದೇವಸ್ಥಾನಗಳನ್ನು ಆಯಾ ದೇವಾಲಯಗಳ ಆದಾಯಕ್ಕನುಗುಣವಾಗಿ ಪ್ರವರ್ಗ 'ಎ' 'ಬಿ' ಮತ್ತು 'ಸಿ' ದೇವಾಲಯಗಳೆಂದು ವರ್ಗೀಕರಿಸಲಾಗಿದೆ. |

| ಪ್ರವರ್ಗ | ವಿವರ | ಸಂಸ್ಥೆಗಳ ಸಂಖ್ಯೆ | ನಿಯಮಿಸಲಾದ ಪ್ರಾಧಿಕಾರಿಗಳು |
|---|---|---|---|
| ಎ | ವಾರ್ಷಿಕ ವರಮಾನವು ರೂ. ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು | 205 | ಆಯುಕ್ತರು |
| ಬಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರಿ ರೂ. ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು | 193 | ಜಿಲ್ಲಾಧಿಕಾರಿಗಳು |
| ಸಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು | 34165 | ಉಪ ವಿಭಾಗಾಧಿಕಾರಿಗಳು |
| | ಒಟ್ಟು | 34563 | |

ii) ಇಲಾಖೆಯ ವ್ಯಾಪ್ತಿಯಲ್ಲಿ ಪ್ರವರ್ಗ 'ಎ' 205 ದೇವಾಲಯಗಳು ಪ್ರವರ್ಗ 'ಬಿ' 193 ದೇವಾಲಯಗಳು ಮತ್ತು ಪ್ರವರ್ಗ 'ಸಿ' 34,165 ದೇವಾಲಯಗಳು ಇದ್ದು ಈ ದೇವಾಲಯಗಳ ಸಾವಿರಾರು ಎಕರೆ ಭೂಮಿಯು ಇನಾಂ ರದ್ದಿಯಾತಿ ಕಾಯ್ದೆ ಮತ್ತು ಭೂಸುಧಾರಣಾ ಕಾಯ್ದೆಯಡಿಯಲ್ಲಿ ಪರಭಾರೆಯಾಗಿರುತ್ತವೆ. ಸದರಿ 'ಬಿ' ಮತ್ತು 'ಸಿ' ವರ್ಗದ ದೇವಾಲಯಗಳ ಸ್ವತ್ತುಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್ ರವರೇ ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. ಅಲ್ಲದೆ ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಸಂಬಂಧಪಟ್ಟ ಉಪವಿಭಾಗದ ಉಪ ವಿಭಾಗಾಧಿಕಾರಿ/ ಸಹಾಯಕ ಆಯುಕ್ತರು ಆಗಿದ್ದು, ಕಂದಾಯ ಇಲಾಖೆ ತಾಲ್ಲೂಕು ತಹಶೀಲ್ದಾರ್ ರವರು ಸದಸ್ಯ ಕಾರ್ಯದರ್ಶಿ ಯಾಗಿರುತ್ತಾರೆ.

**iii)** ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ: ಸಂವ್ಯಶಾ 52 ಶಾಸನ 2021, ಬೆಂಗಳೂರು, ದಿನಾಂಕ:18.01.2022 ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ದೇವಾಲಯಕ್ಕೆ ಸೇರಿರುವ ಮತ್ತಷ್ಟು ಇನಾಂ ಜಮೀನುಗಳು ರೀಗ್ರ್ಯಾಂಟ್ ಆಗುವ ಸಾಧ್ಯತೆ ಇದೆ.

**iv)** ಪ್ರಸ್ತುತ ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೆ ಒಳಪಟ್ಟಿರುವ ಪ್ರವರ್ಗ "ಎ" ಮತ್ತು "ಬಿ" ಅಧಿಸೂಚಿತ ದೇವಸ್ಥಾನ/ ಸಂಸ್ಥೆಗಳಿಗೆ ಸಂಬಂದಿಸಿದಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಮತ್ತು ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಯವರು ನವೆಂಬರ್ 2022ರ ಅಂತ್ಯಕ್ಕೆ ಸಲ್ಲಿಸಿರುವ ಸ್ಥಿರಾಸ್ತಿಯ ಮಾಹಿತಿಯಂತೆ ಪ್ರವರ್ಗ "ಎ" 205 ದೇವಾಲಯಗಳ ಒಟ್ಟು ಸ್ಥಿರಾಸ್ತಿ 6,384 ಎಕರೆ 27 ಗುಂಟೆ ಹಾಗೂ

.......2

| | | |
|---|---|---|
| | | ಪ್ರವರ್ಗ "ಬಿ" 193 ದೇವಾಲಯಗಳ ಒಟ್ಟು ಸ್ಥಿರಾಸ್ತಿ 1,555 ಎಕರೆ 28 ಗುಂಟೆ ಇರುತ್ತದೆ. ಸದರಿ ಜಿಲ್ಲಾವಾರು, ಮಾಹಿತಿಯನ್ನು **ಅನುಬಂಧ-01 ಮತ್ತು ಅನುಬಂಧ-02** ರಲ್ಲಿ ಹಾಗೂ ದೇವಾಲಯವಾರು ಮಾಹಿತಿಯನ್ನು **ಅನುಬಂಧ-03 ರಲ್ಲಿ** ಸಿಡಿ ರೂಪದಲ್ಲಿ ಒದಗಿಸಿದೆ.<br>ಅಧಿಸೂಚಿತ ದೇವಾಲಯಗಳ ಪೈಕಿ, ಪ್ರವರ್ಗ "ಸಿ" ಒಟ್ಟು 34,165 ದೇವಾಲಯಗಳು ಹೊಂದಿರುವ ಆಸ್ತಿಯ ಬಾಬ್ತು ಇನಾಂ ಜಮೀನುಗಳ ಪಹಣಿಗಳಲ್ಲಿ ಮಂಜೂರಾತಿಗಳನ್ನು ಇಂಡೀಕರಿಸಿ ದೇವಾಲಯಕ್ಕೆ ಉಳಿದಿರುವ ಜಮೀನುಗಳ ಬಾಬ್ತು ಲಭ್ಯವಿರುವ ದೇವಾಲಯವಾರು ಮಾಹಿತಿಯನ್ನು **ಸಿ.ಡಿ.** ಯಲ್ಲಿ ಒದಗಿಸಿದೆ.<br>ರಾಜ್ಯಾದ್ಯಂತ ಇರುವ ಅಧಿಸೂಚಿತ ದೇವಾಲಯದ ಸ್ವತ್ತುಗಳು ಆಯಾಯ ಜಿಲ್ಲೆಯಲ್ಲಿನ ಗ್ರಾಮಠಾಣಾ/ ಪಂಚಾಯಿತಿ/ ಪುರಸಭೆ/ ನಗರಸಭೆ/ ಮಹಾನಗರಪಾಲಿಕೆ/ ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವುದರಿಂದ, ಸದರಿ ವ್ಯಾಪಿಯಲ್ಲಿ ಇರುವ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ (ಖಾಲಿಜಾಗ/ ನಿವೇಶನ/ ಕಟ್ಟಡ/ ಮಳಿಗೆಗಳು/ ಕಲ್ಯಾಣ ಮಂಟಪ/ ಸಮುದಾಯ ಭವನ/ ಅತಿಥಿ ಗೃಹಗಳು ಇತ್ಯಾದಿ) ಮೌಲ್ಯ ನಿರ್ಧರಣೆಯನ್ನು ಅಲ್ಲಿನ ಸ್ಥಳೀಯ ಮಾರುಕಟ್ಟೆ ದರಕ್ಕನುಗುಣವಾಗಿ ಸಕ್ಷಮ ಪ್ರಾಧಿಕಾರಗಳಾದ (ನೋಂದಣಿ ಮತ್ತು ಮುದ್ರಾಂಕ ಇಲಾಖೆ & ಲೋಕೋಪಯೋಗಿ ಇಲಾಖೆ) ನಿರ್ಧರಿಸಲ್ಪಡುವುದರಿಂದ, ಅಲ್ಲದೇ ಕಾಲ ಕಾಲಕ್ಕೆ ಸ್ವತ್ತುಗಳ ಮೌಲ್ಯಗಳಲ್ಲಿ ಬದಲಾವಣೆಯಾಗುವುದರಿಂದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು 34563 ಮುಜರಾಯಿ ದೇವಾಲಯಗಳ ಸ್ವತ್ತುಗಳ ನಿಖರ ಮೌಲ್ಯವನ್ನು ನವೆಂಬರ್ 2022ರ ಅಂತ್ಯದವರೆಗೂ ಕಲೆಹಾಕಲು ಸಾಧ್ಯವಾಗಿರುವುದಿಲ್ಲ. |
| ಆ) | ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಪಹಣಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇದುವರೆಗೆ ಎಷ್ಟು ಎಕರೆ ಭೂಮಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಖಾತೆ/ಪಹಣಿ ಮಾಡಲಾಗಿದೆ.<br>(ಜಿಲ್ಲಾವಾರು ವಿವರ ನೀಡುವುದು) | i) ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ರಾಜ್ಯದ ಒಟ್ಟು 34563 ದೇವಸ್ಥಾನಗಳು ಒಳಪಟ್ಟಿರುತ್ತವೆ. ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚಿತ ದೇವಾಲಯಗಳ ಪಟ್ಟಿಯಲ್ಲಿರುವ ದೇವಾಲಯ/ಸಂಸ್ಥೆಯ ಹೆಸರನ್ನು ಮ್ಯುಟೇಶನ್ ಮತ್ತು ಆರ್.ಟಿ.ಸಿ.ಯಲ್ಲಿ ನಮೂದಿಸುವ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ: ಕಂ.ಇ 49 ಮುಅಬಿ 2021 ದಿನಾಂಕ:11-11-2021ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಪತ್ರ ಬರೆಯಲಾಗಿರುತ್ತದೆ ಹಾಗೂ ಈ ಕುರಿತು ಕರ್ನಾಟಕ ರಾಜ್ಯ ಪತ್ರದಲ್ಲಿ ಸ್ಥಿರಾಸ್ತಿಯ ವಿವರಗಳನ್ನು ಪ್ರಕಟಿಸಲು ಧಾರ್ಮಿಕ ದತ್ತಿ ಆಯುಕ್ತರು ಎಲ್ಲಾ ಜಿಲ್ಲಾಧಿಕಾರಿಗಳಿಗೂ ನಿರ್ದೇಶನ ನೀಡಲಾಗಿರುತ್ತದೆ.<br>ii) ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಧಾರ್ಮಿಕ ಸಂಸ್ಥೆಗಳ ಸ್ಥಿರಾಸ್ತಿಯನ್ನು ದೇವಾಲಯ/ಸಂಸ್ಥೆಯ ಹೆಸರನ್ನು ಮ್ಯುಟೇಶನ್ ಮತ್ತು ಆರ್.ಟಿ.ಸಿ.ಯಲ್ಲಿ ನಮೂದಿಸಿದ ಬಗ್ಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಪ್ರಸ್ತಾವನೆಯನ್ನು ಆಯುಕ್ತರ ಕಛೇರಿಗೆ ಸಲ್ಲಿಸಿದ ನಂತರವೇ ಎಷ್ಟು ಎಕರೆ ಭೂಮಿಯನ್ನು ದೇವರ ಹೆಸರಿಗೆ ಖಾತೆ/ಪಹಣಿ ಮಾಡಲಾಗಿದೆ ಎಂಬ ಮಾಹಿತಿ ಲಭ್ಯವಾಗುತ್ತದೆ.<br>iii) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಎಲ್.52/ ಶಾಸನ/ 2021 ದಿನಾಂಕ: 18-01-2022 ರನ್ವಯ ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯ್ದೆ 1977 ಮತ್ತು ಕರ್ನಾಟಕ ಸಂಡೂರ ಪ್ರದೇಶ ಇನಾಂ ರದ್ದಿಯಾತಿ ಕಾಯ್ದೆ 1976 ರಡಿಯಲ್ಲಿ ಇನಾಂ ಜಮೀನುಗಳ ಹಕ್ಕುದಾರಿಕೆ ಕೋರಿ ಅರ್ಜಿಯನ್ನು ಸಲ್ಲಿಸಲು ಒಂದು ವರ್ಷಗಳ ಕಾಲಾವಧಿಯನ್ನು ಅಧಿಸೂಚನೆ ದಿನಾಂಕದಿಂದ ಒಂದು ವರ್ಷದ ಅವಧಿಗೆ ವಿಸ್ತರಿಸಿರುತ್ತದೆ. (ದಿನಾಂಕ:01-01-2022 ರಿಂದ ದಿನಾಂಕ:31-12-2022ರವರೆಗೆ) ಈ ಹಿನ್ನೆಲೆಯಲ್ಲಿ, ನಿಖರ ಮಾಹಿತಿಯನ್ನು ನೀಡಲು ಸಾಧ್ಯವಾಗಿರುವುದಿಲ್ಲ. |

.......3

ಇ) ಮುಜರಾಯಿ ಇಲಾಖೆಯ ಒಟ್ಟು ಆದಾಯವೆಷ್ಟು: ಅದನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಲಾಗುತ್ತಿದೆ: ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟು ಎಷ್ಟು ದೇವಸ್ಥಾನಗಳನ್ನು ಕಳೆದ 3 ವರ್ಷಗಳಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ: (ಜಿಲ್ಲಾವಾರು ವಿವರ ನೀಡವುದು)

ಆಯಾಯ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಪ್ರವರ್ಗ "ಎ" ಮತ್ತು "ಬಿ" ದೇವಾಲಯಗಳಿಗೆ ಬಂದ ಆದಾಯವನ್ನು ಆಯಾಯ ದೇವಾಲಯಗಳ ನಿಧಿ(ಬ್ಯಾಂಕ್ ಖಾತೆ)ಗೆ ಜಮಾ ಮಾಡಲಾಗುತ್ತದೆ. ಅಧಿಸೂಚಿತ ದೇವಾಲಯಗಳಿಗೆ ಬರುವ ಆದಾಯವನ್ನು ಆಯಾಯ ದೇವಾಲಯಗಳ ಬ್ಯಾಂಕ್ ಖಾತೆಯಲ್ಲಿ ಸಂಗ್ರಹಿಸಿ ದೇವಾಲಯದ ನಿರ್ವಹಣೆಗೆ ನಿತ್ಯಕಟ್ಟೆ, ಹೆಚ್ಚು ಕಟ್ಟೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ/ಜೀರ್ಣೋದ್ಧಾರ ಮತ್ತು ಮೂಲ ಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮತ್ತು ಸಾರ್ವಜನಿಕ ಕಲ್ಯಾಣ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 36(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತದೆ.

ಕಳೆದ 3 ವರ್ಷಗಳಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಪ್ರವರ್ಗ "ಎ"-205 ದೇವಾಲಯಗಳ ಹಾಗೂ ಪ್ರವರ್ಗ "ಬಿ"-193 ದೇವಾಲಯಗಳ ದುರಸ್ಥಿ/ ಜೀರ್ಣೋದ್ಧಾರ/ ಅಭಿವೃದ್ಧಿ ಕಾರ್ಯಗಳನ್ನು ಆಯಾಯ ದೇವಾಲಯಗಳ ನಿಧಿಯಿಂದ ಭರಿಸಿ ಅಥವ ಸಾರ್ವಜನಿಕ ವಂತಿಕೆ/ದಾನಿಗಳ ಸಹಾಯದಿಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ನಿಯಮಗಳು 2022ರ ನಿಯಮ 40(ಎ)ರನ್ವಯ ಧಾರ್ಮಿಕ ದತ್ತಿ ಆಯುಕ್ತರ ಸುತ್ತೋಲೆ ಸಂಖ್ಯೆ: ಸಿಎನ್‌ಆರ್.1/ಸಿಆರ್.142/2014-15 ದಿನಾಂಕ:13-01-2015ರಂತೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಯನ್ನು ಪಡೆದು ಕ್ರಮ ಕೈಗೊಳ್ಳಲಾಗುತ್ತಿದೆ.

(ಜಿಲ್ಲಾವಾರು ದೇವಾಲಯಗಳ ಪಟ್ಟಿಯನ್ನು **ಅನುಬಂಧ-4**ರಲ್ಲಿ ಒದಗಿಸಿದೆ)

ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಪ್ರವರ್ಗ "ಸಿ"- 34,165 ದೇವಾಲಯಗಳ ದುರಸ್ಥಿ/ ಜೀರ್ಣೋದ್ಧಾರ/ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 95 ಮುಆಬಿ 2010, ದಿನಾಂಕ:20.09.2010ರಂತೆ ಅನುದಾನದ ಲಭ್ಯತೆ ಮೇರೆಗೆ ಅಗತ್ಯವಿರುವ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಸರ್ಕಾರದಿಂದ ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ದೇವಾಲಯಗಳು ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳ ದುರಸ್ತಿ/ ಜೀರ್ಣೋದ್ಧಾರ/ ನಿರ್ಮಾಣಕ್ಕಾಗಿ ಹಾಗೂ ವಸತಿ ಸೌಕರ್ಯ ಮತ್ತು ಮೂಲಭೂತ ಸೌಕರ್ಯಕ್ಕಾಗಿ ಕಳೆದ 03 ವರ್ಷಗಳಲ್ಲಿ ಅನುದಾನ ಬಿಡುಗಡೆ ಮಾಡಲಾದ ಸಂಸ್ಥೆಗಳ ವಿವರ ಈ ಕೆಳಕಂಡಂತೆ ಇದೆ.

| ಕ್ರಸಂ | ಸಾಲು | ಒಟ್ಟು ಸಂಸ್ಥೆಗಳು |
|---|---|---|
| 1 | 2019-20 | 1672 |
| 2 | 2020-21 | 1394 |
| 3 | 2021-22 | 1102 |

(ಜಿಲ್ಲಾವಾರು ವಿವರವನ್ನು ಸಿ.ಡಿ.ಯ **ಅನುಬಂಧದಲ್ಲಿ** ಒದಗಿಸಿದೆ)

ಸಂಖ್ಯೆ: ಕಂಇ 208 ಮುಸಪ್ರ 2022

**(ಶಶಿಕಲಾ. ಅ. ಜೊಲ್ಲೆ)**
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು

## ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ 'ಎ' ಪ್ರವರ್ಗದ ದೇವಸ್ಥಾನಗಳ ಭೂ ಆಸ್ತಿ ವಿವರ

| ಕ್ರ ಸಂ | ಜಿಲ್ಲೆ | ದೇವಸ್ಥಾನಗಳ ಸಂಖ್ಯೆ | ಎಕರೆ | ಗುಂಟೆ | ಎಕರೆ | ಸೆಂಟ್ಸ್ | ವಿಸ್ತೀರ್ಣ (ಚ ಅಡಿ) | ವಿಸ್ತೀರ್ಣ (ಚ ಮೀ) | ವಿಸ್ತೀರ್ಣ (ಚ ಯಾರ್ಡ್ಸ್) | ಷರಾ |
|---|---|---|---|---|---|---|---|---|---|---|
| 1 | ಬಳ್ಳಾರಿ | 4 | 0 | 0 | 1 | 26 | 174756.2978 | 0 | 0 | ಜಿಲ್ಲಾಧಿಕಾರಿಗಳ ಕಚೇರಿಯ ಮುಜರಾಯಿ ಶಾಖೆ ಹಾಗೂ ಅಧಿಸೂಚಿತ ಸಂಸ್ಥೆಗಳ ಕಾರ್ಯನಿರ್ವಹಣಾಧಿಕಾರಿಗಳಿಂದ ಸ್ವೀಕೃತವಾದ ಮಾಹಿತಿಯನ್ನು ಕ್ರೋಢೀಕರಿಸಿ ಸಲ್ಲಿಸಿದೆ. |
| 2 | ವಿಜಯಪುರ | 8 | 0 | 0 | 539 | 51 | 26328.94 | 0 | 0 | |
| 3 | ಬೆಂಗಳೂರು ಗ್ರಾಮಾಂತರ | 3 | 957 | 36.75 | 0 | 0 | 416 | 0.00 | 0 | |
| 4 | ಬೆಂಗಳೂರು ನಗರ | 21 | 64 | 1.5 | 0 | 0 | 810 | 169242.04 | 0 | |
| 5 | ಬೆಳಗಾವಿ | 5 | 1162 | 35 | 0 | 0 | 52166 | 4235 | 0 | |
| 6 | ಬೀದರ್ | 7 | 147 | 27 | 0 | 0 | 0 | 0.00 | 0 | |
| 7 | ಚಾಮರಾಜನಗರ | 2 | 104 | 30 | 0 | 0 | 0 | 0.00 | 0 | |
| 8 | ಚಿಕ್ಕಬಳ್ಳಾಪುರ | 3 | 44 | 1 | 0 | 0 | 0 | 0.00 | 0 | |
| 9 | ಚಿಕ್ಕಮಗಳೂರು | 3 | 22 | 4 | 0 | 0 | 72951.94 | 558.90 | 0 | |
| 10 | ಚಿತ್ರದುರ್ಗ | 4 | 111 | 29 | 0 | 0 | 26949 | 0 | 0 | |
| 11 | ದಕ್ಷಿಣ ಕನ್ನಡ | 43 | 0 | 0 | 467 | 99 | 0 | 1515 | 0 | |
| 12 | ದಾವಣಗೆರೆ | 2 | 0 | 0 | 0 | 0 | 9229 | 0.00 | 0 | |
| 13 | ಗುಲ್ಬರ್ಗಾ | 4 | 147 | 8 | 0 | 0 | 56275 | 0 | 0 | |
| 14 | ಹಾಸನ | 5 | 18 | 17.5 | 0 | 0 | 245036 | 0.00 | 0 | |
| 15 | ಹಾವೇರಿ | 1 | 2 | 38 | 0 | 0 | 0 | 0 | 0 | |
| 16 | ಕೊಡಗು | 3 | 0 | 0 | 416 | 81 | 0 | 0.00 | 0 | |
| 17 | ಕೋಲಾರ | 6 | 34 | 16 | 0 | 0 | 240639 | 0 | 0 | |
| 18 | ಕೊಪ್ಪಳ | 3 | 62 | 1 | 0 | 0 | 0 | 0.00 | 0 | |
| 19 | ಮಂಡ್ಯ | 9 | 83 | 30 | 0 | 0 | 43652 | 1704 | 0 | |
| 20 | ಮೈಸೂರು | 6 | 126 | 16.5 | 0 | 0 | 47687.415 | 119461.3 | 0 | |
| 21 | ರಾಯಚೂರು | 4 | 1094 | 37 | 0 | 0 | 53326 | 0 | 0 | |
| 22 | ರಾಮನಗರ | 7 | 80 | 7.5 | 0 | 0 | 61748.18 | 12257.00 | 0 | |
| 23 | ಶಿವಮೊಗ್ಗ | 4 | 67 | 17 | 0 | 0 | 513550 | 3552.60 | 0 | |
| 24 | ತುಮಕೂರು | 10 | 162 | 4 | 0 | 0 | 3781 | 1227.4 | 0 | |
| 25 | ಉಡುಪಿ | 26 | 0 | 0 | 237 | 4.75 | 0 | 4650 | 0 | |
| 26 | ಉತ್ತರಕನ್ನಡ | 10 | 0 | 0 | 45 | 23.5 | 0 | 0 | 13663 | |
| 27 | ಯಾದಗಿರಿ | 2 | 63 | 0 | 0 | 0 | 0 | 0.00 | 0 | |
| | ಒಟ್ಟು | 205 | 4557 | 36.75 | 1707 | 85.3 | 1629301.773 | 318403.24 | 13663 | |

| ಒಟ್ಟು ವಿಸ್ತೀರ್ಣ ಎಕರೆಗಳಲ್ಲಿ | 6384.00 | 27 |
|---|---|---|

ಚು.ಗು. ಪ್ರಶ್ನೆ ಸಂಖ್ಯೆ 375 - ಅನುಬಂಧ-2

## ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ 'ಬಿ' ಪ್ರವರ್ಗದ ದೇವಸ್ಥಾನಗಳ ಭೂ ಆಸ್ತಿ ವಿವರ

| ಸಂ | ಜಿಲ್ಲೆ | ದೇವಸ್ಥಾನಗಳ ಸಂಖ್ಯೆ | ಎಕರೆ | ಗುಂಟೆ | ಎಕರೆ | ಸೆಂಟ್ಸ್ | ವಿಸ್ತೀರ್ಣ (ಚ ಅಡಿ) | ವಿಸ್ತೀರ್ಣ(ಚ ಮೀ) | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 9 | 10 | |
| 1 | Bagalakot | 2 | 3 | 9.75 | 0 | 0 | 9600 | 0 | |
| 2 | Vijaya nagara | 5 | 0 | 0 | 13 | 6 | 0 | 0 | |
| 3 | Ballari | 7 | 0 | 0 | 23 | 80 | 69244 | 0 | |
| 4 | Bangalore Urban | 16 | 72 | 25 | 0 | 0 | 0 | 31674.88 | |
| 5 | BangaloreRural | 5 | 80 | 20 | 0 | 0 | 11000 | 0 | |
| 6 | Belagaum | 6 | 1 | 49 | 0 | 0 | 0 | 2373.01 | |
| 7 | Bidar | 3 | 38 | 2 | 0 | 0 | 0 | 0.00 | |
| 8 | Bijapur | 1 | 0 | 0 | 0 | 0 | 7500 | 0.00 | |
| 9 | Chamarajanagar | 1 | 0 | 0 | 0 | 0 | 0 | 0.00 | |
| 10 | Chikkaballapur | 4 | 207 | 14 | 0 | 0 | 0 | 0 | |
| 11 | Chikkamagalur | 10 | 104 | 4 | 0 | 0 | 116673 | 0 | |
| 12 | Chitradurga | 4 | 1 | 32 | 0 | 0 | 0 | 0.00 | |
| 13 | Dakshina kannada | 37 | 0 | 0 | 111 | 77 | 16714 | 0 | ಜಿಲ್ಲಾಧಿಕಾರಿಗಳ ಕಚೇರಿಯ ಮುಜರಾಯಿ ಶಾಖೆ ಹಾಗೂ ಅಧಿಸೂಚಿತ ಸಂಸ್ಥೆಗಳ ಕಾರ್ಯನಿರ್ವಹಣಾಧಿಕಾರಿಗಳಿಂದ ಸ್ವೀಕೃತವಾದ ಮಾಹಿಯನ್ನು ಕ್ರೋಢೀಕರಿಸಿ ಸಲ್ಲಿಸಿದೆ. |
| 14 | Davanagere | 8 | 7 | 39 | 0 | 0 | 453127.2 | 9898 | |
| 15 | Gulbarga | 2 | 69 | 10 | 0 | 0 | 0 | | |
| 16 | Hassan | 7 | 10 | 29 | 0 | 0 | 16728 | 0 | |
| 17 | Haveri | 11 | 64 | 19 | 0 | 0 | 0 | 0 | |
| 18 | Kolar | 7 | 4 | 27 | 0 | 0 | 44096 | 38811.28 | |
| 19 | Koppala | 1 | 5 | 33 | 0 | 0 | 0 | 0.00 | |
| 20 | Mandya | 13 | 37 | 35 | 0 | 0 | 88733.75 | 0 | |
| 21 | Mysore | 4 | 377 | 19 | 0 | 0 | 31516 | 0 | |
| 22 | Raichur | 1 | 5 | 6 | 0 | 0 | 0 | 0 | |
| 23 | Ramanagar | 5 | 25 | 6 | 0 | 0 | 0 | 0 | |
| 24 | Shimoga | 1 | 0 | 0 | 0 | 0 | 0 | 48100 | |
| 25 | Tumkur | 6 | 114 | 18 | 0 | 0 | 0 | 0 | |
| 26 | Udupi | 17 | 0 | 0 | 71 | 99 | 0 | 0 | |
| 27 | Uttara kannada | 6 | 0 | 0 | 42 | 20 | 0 | 0 | |
| 28 | Yadagir | 3 | 7 | 31 | 0 | 0 | 0 | 0 | |
| | Grand Total | 193 | 1240 | 28 | 262 | 82 | 864932 | 130857 | |
| | | ಒಟ್ಟು ವಿಸ್ತೀರ್ಣ ಎಕರೆಗಳಲ್ಲಿ | 1555.00 | 28 | | | | | |